ವಿ.ಎಸ್. ಪದ್ಮನಾಭಾಚಾರ್, ಬೆಂಗಳೂರು
ಕೊರೊನಾದಿಂದ ಯಾರಿಗೆ ಲಾಭ ಗುರು?



ಬಿಟ್ಟಿ ಸುದ್ದಿ, ಹುಚ್ಚಾಪಟ್ಟೆ ಟಿಆರ್‌ಪಿ ಪಡೆದ ರದ್ದಿ ಮಾಧ್ಯಮಗಳಿಗೆ.

ನಾಗೇಶ ಮೈಸೂರು, ಸಿಂಗಾಪುರ
ಮಡದಿ ಮತ್ತು ಮಕ್ಕಳು; ಇವರಲ್ಲಿ ಯಾರು ದರಿ, ಯಾರು ಪುಲಿ?
ಮಡದಿ (ಸುಂ)ದರಿ, ಮಕ್ಕಳು (ಇಂ)ಪುಲಿ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ನೀವು ಪ್ರೀತಿಸುವ ಮೊದಲ ವ್ಯಕ್ತಿ ಯಾರು?
ನಾನೇ. ಆತ್ಮಪ್ರೀತಿ ಇಲ್ಲದವನಿಗೆ ವಿಶ್ವಪ್ರೀತಿ ಅಸಾಧ್ಯ.

ಖಾದ್ರಿ ಪ್ರಮೀಳ, ಮೇಲುಕೋಟೆ
ಅಹಂಕಾರಕ್ಕೆ ಉದಾಸೀನವೇ ಮದ್ದು. ದುರಹಂಕಾರಕ್ಕೆ?
ಕಿವಿ ಕೊಡುವವನೇ ಮೊದ್ದು.

ರಾಘವೇಂದ್ರ ಇನಾಮದಾರ, ಹುಬ್ಬಳ್ಳಿ
ನಿಜಕ್ಕೂ ಮಾಸ್ಕ್ ಬಳಕೆಯಿಂದ ಕೊರೊನಾ ಹರಡುವುದನ್ನು ತಡೆಗಟ್ಟಬಹುದೆ ರಾಮ್?



ಕೊಡೆ ಹಿಡಿಯುವುದು ನೆನೆಯದಿರಲೆಂದು; ಮಳೆ ನಿಲ್ಲುತ್ತದೆಂದಲ್ಲ.

ವಿ. ಹೇಮಂತಕುಮಾರ್, ಬೆಂಗಳೂರು
ಹುಡುಗಿಯರಿಗೆ ಕಾಳು ಹಾಕಬೇಕು ಅಂತಾರಲ್ಲ, ಅದು ಯಾವ ಕಾಳು ಸರ್?
ಕ್ರಮವಾಗಿ ಹೆಸರು, ಊದಲು, ಹಾರಕ, ರಾಗಿ...

ಚನ್ನವೀರಪ್ಪ, ಬಿದರಹಳ್ಳಿ
ಕಲಿಕೆ-ಶ್ರದ್ಧೆ ಒಂದೇ ನಾಣ್ಯದ ಎರಡು ಮುಖಗಳಂತೆ ಹೌದಾ?
ಊಹೂಂ. ಒಂದೇ ಮುಖದ ಎರಡು ಕಣ್ಣುಗಳು. ನಾಣ್ಯದ ಮುಖಗಳು ವಿರುದ್ಧ ದಿಕ್ಕಿನಲ್ಲಿರುತ್ತವೆ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
ರಾಜಕಾರಣಿಗಳು ಕೊರೋನಾ ಪಾಸಿಟಿವ್ ಎಂದು ಎಫ್ಬಿ/ಟ್ವಿಟರಲ್ಲಿ ಪ್ರಕಟಿಸಿ ದೂರವಿರಿ ಎನ್ನುವುದರ ಹಿಂದಿನ ಮರ್ಮವೇನು?
ನಿನ್ನಿಂದ ನಮಗೂ ಬಂತು. ಪರಿಹಾರ ನೀಡು ಎಂದಾರೆಂದು ಮುನ್ನೆಚ್ಚರಿಕೆ.

ಜಯಲಕ್ಷ್ಮಿ ಉಪಾಧ್ಯಾಯ, ಕಂಚಾರ್ತಿ
ಮದುವೆ ಯಾಕಾದ್ರೂ ಆದೆನೋ ಎನ್ನುವ ಗಂಡಸರೇ ಬೇರೆ ಹುಡುಗರಿಗೆ ಬೇಗ ಲಗ್ನವಾಗಲು ಒತ್ತಾಯಿಸುವವರಲ್ಲಾ?
ಸಮಾನದುಃಖಿಗಳ ಸಂಘ ಸ್ಥಾಪಿಸಲು ಹೆಚ್ಚು ಜನ ಬೇಕಲ್ಲ!

ವಿಜಯಾ ಬಿದರಹಳ್ಳಿ, ಹಿರೇಹಡಗಲಿ
ಸತ್ಯಕ್ಕೆ ಎರಡು ಕಾಲು, ಸುಳ್ಳಿಗೆ ಸಾವಿರ ಕಾಲು. ಇದರ ಅರ್ಥ ತಿಳಿಸುವಿರಾ?
ಸತ್ಯಕ್ಕೆ ಸುಳ್ಳಿಗಿಂತ ಬಹಳ ಕಡಿಮೆ ಬೆಂಬಲ ಇದೆಯೆಂದು.

ವಿ. ಹಮೀದ್, ವಿಟ್ಲ
ಪತಿ ಕೋರ್ಟಿಗೆ ಹೋಗುವಾಗ ಪತ್ನಿಯ ಕೆನ್ನೆಗೆ ಮುತ್ತು ಕೊಡುತ್ತಾನೇಕೆ?
ಒಳ್ಳೆಯ ಕ್ರಿಮಿನಲ್ಸ್ ಸುಳಿವುಗಳನ್ನು ಬಿಡುವುದಿಲ್ಲ. ತುಟಿಗೆ ಮುತ್ತಿತ್ತರೆ ಲಿಪ್‌ಸ್ಟಿಕ್‌ನ ಎವಿಡೆನ್ಸ್ ಇರುತ್ತಲ್ಲ!

ವಿನುತ ಮುರಳೀಧರ, ಬಾಳೆಬೈಲು
ದಂಡ ಹೆಚ್ಚಾಯಿತೆಂದು ಎಲ್ಲದಕ್ಕೂ ಬೊಬ್ಬೆ ಹೊಡೆಯುವವರಿಗೆ ಕಾನೂನು ಪಾಲಿಸಲೇನು ತೊಂದರೆ ರಾಮ್?
ಲಂಚಕ್ಕೆ ಕಾನೂನು ಮಾರುವ ಭ್ರಷ್ಟರದೇ ತೊಂದರೆ. ಅವರದು ಯಮದಂಡವಾದರೆ ಇವರದು ದೀರ್ಘದಂಡವಾದೀತು.

ಎಲ್.ಎಸ್. ಶಿವಕುಮಾರ, ಊರಿಲ್ಲ
ಸ್ವಾರ್ಥ ತೊರೆದು, ಸತ್ಯ ಸೇವಿಸಿ, ಪ್ರಾಮಾಣಿಕತೆ ಉಂಡು ರಾಜಕೀಯಕ್ಕೆ ಎಂಟ್ರಿ ಕೊಟ್ರೆ ಏನಾದೀತು ರಾಮ್?
ಕಾರ್ಪೊರೇಟರ್ ಎಲೆಕ್ಷನ್ನಲ್ಲೇ ಠೇವಣಿ ಹೋದೀತು.

## ಬಹುಮಾನಿತ ಪ್ರಶ್ನೆ

ಅನಸೂಯ ಟಿ. ಕೇದಿಗೆಮನೆ
ಎಡವಿ ಬೀಳುವುದರಲ್ಲಿ ಕಣ್ಣಿಲ್ಲದವರಿಗಿಂತ ಕಣ್ಣಿದ್ದವರೇ ಜಾಸ್ತಿ ಏಕೆ?
ಏಕೆಂದರೆ ಕಣ್ಣಿಲ್ಲದವರಿಗೆ ರಸ್ತೆಯ ಮೇಲೆ ಗಮನ, ಕಣ್ಣಿದ್ದವರಿಗೆ ರಸ್ತೆಯ ಮೇಲಿರುವುದರ ಮೇಲೆ ಗಮನ.

ಸೀಮಂತಿನಿ ದೇಸಾಯಿ, ಬೆಂಗಳೂರು
ರಾಮ್‌ರ ಉತ್ತರ ಬಾಣ ತಪ್ಪಿದ್ದುಂಟೆ?
ಕೊಟ್ಟ ಉತ್ತರವನ್ನೆಲ್ಲ ಓದುಗರು ಒಪ್ಪಿದ್ದುಂಟು, ಅಪ್ಪಿದ್ದುಂಟು. ಆದ್ದರಿಂದ ತಪ್ಪಿದ್ದಿಲ್ಲ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
ನಮ್ಮ ಶಕ್ತಿಯೇ ನಮ್ಮ ದೌರ್ಬಲ್ಯವೂ ಆಗಿಬಿಡುತ್ತಾ ರಾಮ್?
ಹೌದು. ಶಕ್ತಿ ಉಪ್ಪಿನಂತೆ. ಹದವಿದ್ದರೆ ರುಚಿ; ಹದ ಮೀರಿದರೆ ಛೀ!

ಆರ್. ಸುನೀಲ್, ತರೀಕೆರೆ
ಬಾರಿಗೆ ಬಾರದ ಕೊರೊನಾ ಸಿನಿಮಾ ಟಾಕೀಸಿಗೆ ಬರುತ್ತದಾ ಗುರುಗಳೇ...?



ಬಾರಿಗೆ ಬಂದರೆ ಮದ್ಯಸ್ನಾನ ಮಾಡಿಸಿ ನಿಶಕ್ತರಾಗಿಸುತ್ತಾರೆ. ಟಾಕೀಸಲ್ಲಿ ಆ ವ್ಯವಸ್ಥೆ ಇಲ್ಲವಲ್ಲ!

ಸ್ವಾತಿ ಎಂ.ಎಸ್. ಗೌರಿಬಿದನೂರು
ದೇಹ ಪ್ರವೇಶಿಸಲು ಕೊರೊನ ಕಣ್ಣು, ಮೂಗು, ಬಾಯಿಯನ್ನೇ ಆಯ್ಕೆ ಮಾಡಿಕೊಂಡಿದ್ದೇಕೆ?
ಎಚ್ಚರಿಕೆಯ ಮಾತುಗಳನ್ನು ಕಿವಿಗೆ ಹಾಕಿಕೊಳ್ಳದ ಕಾರಣ ಇವೆಲ್ಲವೂ ಓಪನ್ ಆಗಿದ್ದವಲ್ಲ!

ಕೊ.ಸು. ನರಸಿಂಹಮೂರ್ತಿ, ಮೈಸೂರು
ಕೊರೊನಾದಿಂದ ಕೆಲವರು ಕಾಸು ಮಾಡಿಕೊಂಡು ಉದ್ಧಾರವಾದರಂತಲ್ಲ ರಾಮ್?
ಪ್ರತಿ ಹೆಣ ಸಿಕ್ಕಾಗಲೂ ಹದ್ದು ಹಬ್ಬ ಆಚರಿಸುವುದು ತಪ್ಪದು.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in